Calling Attention to matters of urgent Public Importance.

(i) re: Tiger menace in Savanadurga Magadi Taluk.

ಶ್ರೀ ಬೆಟ್ಟಸ್ವಾಮಿಗೌಡ (ಮಾಗಡಿ).—ಮಾಗಡಿ ತಾಲ್ಲೂಕು ಸಾವನದುರ್ಗ ಕಾಡಿನಲ್ಲಿ ಹುಲಿಯು ಸುತ್ತಮುತ್ತಲಿನ ಗ್ರಾಮಗಳ ಜಾನುವಾರುಗಳನ್ನು ಕೊಂದು ನಷ್ಟ ಉಂಟು ಮಾಡುತ್ತಿರುವುದರ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಮಂತ್ರಿಗಳು).—ಸ್ವಾಮಿ, ನನ್ನ ಹೇಳಿಕೆ ಈ ರೀತಿ ಇದೆ: ಸಾವನದುರ್ಗ ಮನ್ನಾ ಜಂಗಲಿಯಲ್ಲಿ ಹುಲಿಯಿಂದ ದನಕರುಗಳ ಸಾವು ನೋವುಗಳ ಬಗ್ಗೆ ವಿಚಾರಿಸಲು ಅರಣ್ಯ ಅಧಿಕಾರಿಗಳನ್ನು ಸದರಿ ಪ್ರದೇಶಗಳಿಗೆ ಕಳುಹಿಸಲಾಗಿತ್ತು. ಗ್ರಾಮಸ್ಥರ ಹೇಳಿಕೆಯ ಪ್ರಕಾರ ಈಗ್ಗೆ ಸುಮಾರು ಒಂದೂವರೆ ತಿಂಗಳಿನಿಂದಲೂ ಸದರಿ ಅರಣ್ಯದಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಜಾನುವಾರುಗಳ ಜೀವಕ್ಕೆ ಅಪಾಯ ಒದಗಿ ಸುಮಾರು ೨೦ ಜಾನುವಾರುಗಳು ಕೊಲ್ಲಲ್ಪಟ್ಟಿವೆ ಎಂದು ತಿಳಿದುಬಂದಿರುತ್ತದೆ. ಈ ಬಗ್ಗೆ ನಷ್ಟ ಸಂಭವಿಸಿದ ವಿವರ ಕೆಳಕಂಡಂತಿದೆ;—

೧.	ನಾಯ್ಕನಪಾಳ್ಯ ಗ್ರಾಮದ್ದು	೫ ಹಸುಗಳು
೨.	ಲಂಬಾಣಿ ತಾಂಡ	೨ ಹಸುಗಳು
೩.	ಕಲ್ಯಾಣಿದೇವರ ಮಠ	೧ ಹಸು
೪.	ಜೋಡುಗಟ್ಟೆ ಗ್ರಾಮ	೨ ಹಸುಗಳು
೫.	ನೆಲಪಟ್ಟಣ (ಸಾವನದುರ್ಗ)	೩ ಹಸುಗಳು (೨ ಹಸು ಮತ್ತು ೧ ಎತ್ತು)
೬.	ದಬ್ಬಗುಳಿ ಗ್ರಾಮ	೩ ಹಸುಗಳು
೭.	ಮತ್ತ ಗ್ರಾಮ	೪ ಹಸುಗಳು
	ಒಟ್ಟು	೨೦ ಹಸುಗಳು

ಸದರಿ ಗ್ರಾಮಗಳು ಸಾವನದುರ್ಗದ ಸುಮಾರು ಐದು ಮೈಲಿ ಸುತ್ತಲೂ ಆವರಿಸಿವೆ.

ಜಾನುವಾರುಗಳಿಗೆ ಈ ತರಹ ಹಾನಿ ಉಂಟು ಮಾಡಿದ ಕಾಡು ಪ್ರಾಣಿ ಯಾವುದೆಂಬುದು ನಿಖರವಾಗಿ ಗೊತ್ತಾಗಿರುವುದಿಲ್ಲ. ಈ ಗ್ರಾಮನಿವಾಸಿಗಳ ಹೇಳಿಕೆ ಪ್ರಕಾರ ಒಂದು ಕಾಡು ನಾಯಿಯು ಹಸುವನ್ನು ತಿನ್ನುತ್ತಿದ್ದುದನ್ನು ದೂರದಿಂದ ನೋಡಿರುವುದಾಗಿ ತಿಳಿದುಬಂದಿರುತ್ತೆ. ಇವರ ಹೇಳಿಕೆಯ ಪ್ರಕಾರ ಇಂತಹ ಹಾವಳಿಯು ಹುಲಿಯಿಂದಲ್ಲವೆಂದು ಈ ಕಾಡುಪ್ರಾಣಿ ಚಿರತೆಯಾಗಿರಬಹುದೆಂದು ಊಹಿಸಲಾಗಿರುತ್ತೆ.

ಕಾಡುಪ್ರಾಣಿಗಳಿಂದ ಈ ತರಹ ತೊಂದರೆ ಬಂದಿದಾಗ್ಯೂ ಕೂಡ ಗ್ರಾಮಗಳ ಜನರು ತಮ್ಮ ತೊಂದರೆಯನ್ನು ಅರಣ್ಯ ಇಲಾಖೆಯವರ ಗಮನಕ್ಕೆ ಈ ಮೊದಲು ತಂದಿಲ್ಲ. ಈ ವಿಷಯದಲ್ಲಿ ಅರಣ್ಯ ಇಲಾಖೆಯವರು ವಿಶದವಾಗಿ ತನಿಖೆಯನ್ನು ನಡೆಸಿ ಮೇಲ್ಕಂಡ ಕಾರಣಗಳಿಂದ ಜಾನುವಾರುಗಳನ್ನು ಕಳೆದುಕೊಂಡವರಿಗೆ ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ತಿಳಿದುಕೊಂಡು ಅಂತಹವರಿಗೆ ಸೂಕ್ತ ಪರಿಹಾರವನ್ನು ಕೊಡಲು ವ್ಯವಸ್ಥೆ ಮಾಡಲಾಗುತ್ತೆ. ಮುಂದೆ ಇಂತಹ ಪ್ರಸಂಗಗಳು ಅರಣ್ಯ ಇಲಾಖೆಯವರ ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮವನ್ನು ತಕ್ಷಣವೇ ಕೈಗೊಳ್ಳಲಾಗುತ್ತದೆ.

ಶ್ರೀ ಬೆಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಹಾನಿಯುಂಟು ಮಾಡಿರುವ ಕಾಡುಪ್ರಾಣಿ ಹುಲಿಯಲ್ಲ ಚಿರತೆಯಾಗಿರಬಹುದು ಎಂದು ಹೇಳಿದ್ದಾರೆ. ಅದು ಹುಲಿಯಾಗಿರಲಿ ಚಿರತೆಯಾಗಿರಲಿ ಅದು ಮುಖ್ಯವಲ್ಲ, ಆಂತೂ ದನಕರುಗಳಿಗೆ ಹಾನಿ ಮಾಡಿದೆ, ನಷ್ಟವನ್ನುಂಟು ಮಾಡಿದೆ. ಇದರಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಭಯವುಂಟಾಗಿದೆ. ಸಚಿವರ ಹೇಳಿಕೆ ಪ್ರಕಾರ ಒಟ್ಟು ೨೦ ಹಸುಗಳು ಕೊಲ್ಲಲ್ಪಟ್ಟಿವೆ. ಆದರೆ ನನಗೆ ಗೊತ್ತಾಗಿರುವ ಪರದಿ ಪ್ರಕಾರ ೪೦ ರಿಂದ ೫೦ ರಾಸುಗಳಿಗೆ ನಷ್ಟವುಂಟಾಗಿದೆ. ನಷ್ಟ ಉಂಟು ಮಾಡಿರುವುದು ಚಿರತೆಯಾಗಿರಲಿ, ಹುಲಿಯಾಗಿರಲಿ, ನಾಯಿಯಾಗಿರಲಿ ತಕ್ಷಣ ಅದನ್ನು ಹೊಡುಕಿಸಿ ಗ್ರಾಮಗಳಲ್ಲಿ ಆಗುತ್ತಿರುವ ನಷ್ಟವನ್ನು ತಪ್ಪಿಸುವುದಕ್ಕೆ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಈ ಸಂಖ್ಯೆಯ ವಿಚಾರವಾಗಿ ಹೇಳುವುದಾದರೆ, ಇದು ಆಹುದಾದರೆ ಆಹುದೆನ್ನಿ, ಇಲ್ಲವಾದರೆ ಇಲ್ಲವೆನ್ನಿ, ಆದರೆ ಬಹು ಜನರು ಹೇಳುವ ಮಾತು ಇದು. ಆದರಂತೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಧಿಕಾರಿಗಳನ್ನು ಕಳಿಸಿದ್ದೇನೆ. ನಿಜಾಂಶವನ್ನು ಜಾಗ್ರತೆಯಾಗಿ ತಿಳಿದು ಅಲ್ಪೇನಾದರೂ ಕಾಡುಪ್ರಾಣಿಯಿದ್ದರೆ ತಕ್ಕ ಬಂದೋಬಸ್ತನ್ನು ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

ಶ್ರೀ ಬೆಟ್ಟಸ್ವಾಮಿಗೌಡ.—ಸ್ವಾಮಿ, ಈಗ ಈ ನಷ್ಟ ಅನುಭವಿಸಿರತಕ್ಕ ಸುತ್ತಮುತ್ತಲಿನ ಗ್ರಾಮದವರಿಗೆ ಸೂಕ್ತವಾದ ಪರಿಹಾರವನ್ನು ಕೊಡುವುದಾಗಿ ಈಗತಾನೇ ಹೇಳಿಕೆಯಲ್ಲಿ ಹೇಳಿದ್ದೀರಿ. ಆದರೆ ಅದನ್ನು ಯಾವಾಗ ಕೊಡುತ್ತಾರೆ, ಎಷ್ಟು ಕೊಡುತ್ತಾರೆ, ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ.—ಇದರ ಬಗ್ಗೆ ಇದುವರೆಗೂ ಒಂದು ಅರ್ಜಿಯೂ ಬಂದಿಲ್ಲ. ಅರ್ಜಿಗಳು ಬಂದಕೂಡಲೇ ಸತ್ತಿರುವ ದನಗಳ ಬೆಲೆಯುಮೇಲೆ ಪರಿಹಾರವನ್ನು ಕೊಡುವ ಏರ್ಪಾಡು ಮಾಡಲಾಗುವುದು. ಡಿ.ಎಫ್.ಓ. ಅವರಿಗೆ ೨೫೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೫೦೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೧ ಸಾವಿರ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ನಷ್ಟ ಯಾವರೀತಿಯಾಗಿದೆ ಎಂಬುದನ್ನು ಪರೀಕ್ಷೆ ಮಾಡಿ ಪಾವತಿ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಅದರ ಪ್ರಕಾರ ತನಿಖೆ ಮಾಡಿ ಯಾವ ಯಾವ ಅರ್ಜಿ ಬರುತ್ತದೋ ಅದರ ಬಗ್ಗೆ ತಡವಿಲ್ಲದೇ ತಕ್ಷಣ ಪರಿಹಾರ ನೀಡುವಂತೆ ಏರ್ಪಾಡು ಮಾಡುತ್ತೇನೆ.

Re :—Allotment of land reserved for playground to Private Management.

ಶ್ರೀ ಎಂ. ಚಂದ್ರಶೇಖರ್.—ಜಮೀನು ಅಲಾಟ್ ಆಗಿರುವುದನ್ನು ಕ್ಯಾನ್ಸಲ್ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು.—ಇದು ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟಿದ್ದು. ಅವರು ಈಗ ಇಲ್ಲ.

ಶ್ರೀ ಎಂ. ಚಂದ್ರಶೇಖರ್. —ಮಾನ್ಯಮಂತ್ರಿಗಳೇ ಆಶ್ವಾಸನೆ ಕೊಟ್ಟರೆ ಸಾಕು.

SRI D. DEVARAJ URS.—Unless I know whether it is illegal or whether is unnecessary interference, how can I give a promise?

MR. SPEAKER.—I withhold it.

SRI D. DEVARAJ URS.—Let him write to me what exactly is the position and I shall look into it.

10-30 A. M.

(*iii*) *re: arrest of workers of Mysore metal and wire factory Bangalore*

SRI B. V. KAKKILAYA (Vittal).—I call the attention of the Chief Minister to the arrest of 50 workers of Mysore Metal and Wire Factory, Bangalore.

SRI D. DEVARAJ URS (Chief Minister).—I wish to make the following Statement:

The Mysore Wire and Metal Industries Factory is located at Tumkur Road, Bangalore. The workers numbering about 80 are on strike since 30-7-78, following the termination of an employees by